ಪವರ್ ಪ್ಲ್ಯಾಂಟ್ ಹಾಕುವ ಯೋಚನೆ ಮಾಡಿದ್ದರು. ಅದಕ್ಕಾಗಿ ನನಗೆ ಪರಿಚಯವಿದ್ದ ಒಬ್ಬ ವ್ಯಕ್ತಿಯನ್ನು ಅವರಿಗೆ ಪರಿಚಯಿಸಿದ್ದೆ.

ಕಾರು, ಬೈಕುಗಳ ಮೋಹ ಇತ್ಯಾದಿಗಳು ಅವರ ವ್ಯಕ್ತಿತ್ವವಾಗಿರಲಿಲ್ಲ. ಅದನ್ನು ಅವರು ಪ್ರತಿಷ್ಠೆಯಾಗಿ ಪ್ರದರ್ಶನ ಮಾಡಲಿಲ್ಲ. ಮನೆಯಲ್ಲಿ ಇಂಪೋರ್ಟೆಡ್ ಕಾರುಗಳಿದ್ದರೂ ಅವರು ತಿರುಗಾಡುತ್ತಿದ್ದದ್ದು ಸಾಮಾನ್ಯ ಕಾರಿನಲ್ಲೇ. ಆದರೆ ಅವುಗಳ ತಂತ್ರಜ್ಞಾನದ ಬಗ್ಗೆ ಅಪಾರ ಕುತೂಹಲವಿರುತಿತ್ತು. ಒಂದು ವಸ್ತುವನ್ನು ಅದರ ಉತ್ಕೃಷ್ಟತೆಯನ್ನು ಅರಿತು, ಮೆಚ್ಚುವ ರಸಿಕಗುಣ ಅವರಲ್ಲಿತ್ತು.

## ಹೊಸಬರಿಗೆ ಬಿಸಿಯಪ್ಪುಗೆ

ಕನ್ನಡ ಚಿತ್ರರಂಗದಲ್ಲಿ ಒಂದು ವಾಡಿಕೆಯ ಪರಿಪಾಟವಿದೆ. ಯಾರೊ ಹೊಸಬರ ಒಂದು ಸಿನಿಮಾವೋ, ಕಿರುಚಿತ್ರವೋ ಹಿಟ್ ಆದರೆ ಆತ ಮತ್ತೊಮ್ಮೆ ಸಿಕ್ಕಾಗ ಹೇಳುತಿದ್ದದ್ದು, ‘ಅಪ್ಪು ಸರ್‌ಗೆ ಒಂದು ಸ್ಕ್ರಿಪ್ಟ್ ಮಾಡ್ತಾ ಇದ್ದೀನಿ’ ಅನ್ನೋದು. ಇಲ್ಲಿ ಎರಡು ವಿಷಯ. ಆ ಹೊಸಬನ ಕೆಲಸ ಚೆನ್ನಾಗಿದ್ದರೆ ಹೇಗೋ ಮಾಡಿ ಆತನ ನಂಬರ್ ಹಿಡಿದು ಮಾತಾಡಿಸಿ ಹುರಿದುಂಬಿಸುತ್ತಿದ್ದರು ಪುನೀತ್. ಆ ಮಾತುಗಳಿಂದ ಆತ ಎಷ್ಟು ಪ್ರೇರೇಪಿತನಾಗಿರುತ್ತಿದ್ದನೆಂದರೆ – ಮುಂದೆ ಅವರೊಂದಿಗೆ ಕೆಲಸ ಮಾಡುತ್ತೇನೆ ಅನ್ನುವಷ್ಟು ಸ್ಫೂರ್ತಿ ತುಂಬಿಕೊಳ್ಳುತಿದ್ದ. ಹೀಗೆ ಪರಿಚಯವಾಗಿ ಅವರೊಟ್ಟಿಗೆ ಕೆಲಸ ಮಾಡಿದ ಬೇಕಾದಷ್ಟು ಜನ ಇದ್ದಾರೆ.

ಪುನೀತ್ ಯಾವತ್ತೂ ಯಾರನ್ನೂ ದೂರಿದವರಲ್ಲ. ಹಿಂದಿನಿಂದ ಯಾರ ಬಗ್ಗೆಯೂ ಕೆಟ್ಟದಾಗಿ ಮಾತಾಡಿದವರಲ್ಲ. ನನಗಿನ್ನೂ ನೆನಪಿದೆ, ‘ಅಣ್ಣಾ ಬಾಂಡ್’ ಫೋಟೊಶೂಟ್ ದಿನ. ಕನ್ನಡದ ಇನ್ನೊಬ್ಬ ಜನಪ್ರಿಯ ನಟ ಪೊಲೀಸ್ ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡ ಸುದ್ದಿ ಬರುತ್ತಿತ್ತು. ಸುತ್ತ ಇದ್ದವರೆಲ್ಲ ಅವರ ಅಭಿಪ್ರಾಯ ಹೇಳುತ್ತಿದ್ದರು. ಆದರೆ ಪುನೀತ್ ಒಂದೇ ಒಂದು ಮಾತು ನಕಾರಾತ್ಮಕ ಮಾತೂ ಮಾತಾಡಲಿಲ್ಲ.

## ಅಭಿಮಾನಿಗಳೆದುರು ವಿನಮ್ರ

ಅಭಿಮಾನಿಗಳ ಬಗ್ಗೆ ಅವರಿಗಿದ್ದ ಪ್ರೀತಿ ಅಪಾರ. ಅದು ಅಭಿಮಾನಿಗಳಿಗೆ ತೋರಿಕೆಯ ಒಂದು ಫೋಟೊ ತೆಗೆಸಿಕೊಂಡು, ಕೈ ಆಡಿಸಿಯೋ ಹೋಗಿಬಿಡುವಂಥದ್ದಲ್ಲ. ಅವರ ಬಳಿ ನಿಂತು ಮಾತಾಡಿ ಸಂತೈಸಿ ಕಳುಹಿಸುವಂತಹುದು. ‘ಪರಮಾತ್ಮ’ ಸಿನಿಮಾದ ಚಿತ್ರೀಕರಣ ಶಿರಾಡಿಘಾಟಿಯಲ್ಲಿ ನಡೆಯುತಿತ್ತು. ಧರ್ಮಸ್ಥಳದ ಕಡೆಯಿಂದ ಬಂದ ಒಂದು ಬಸ್ಸಿನ ತುಂಬ ಜನ ಪುನೀತ್ ಅವರನ್ನು ದೂರದಿಂದಲೇ ಗುರುತಿಸಿದರು. ಬಸ್ಸಿನಲ್ಲಿ ಒಂದೇ ಕಲರವ. ಆದರೆ ಶೂಟಿಂಗ್ ಹುಡುಗರು ಬಸ್ ನಿಲ್ಲಿಸಲು ಬಿಡುತ್ತಿಲ್ಲ. ನಿಧಾನಕ್ಕೆ ಮುಂದೆ ಹೋಗುತ್ತಿದ್ದ ಬಸ್ಸಿನ ಕಿಟಕಿ ತುಂಬಾ ಕೈಗಳು. ‘ಅಪ್ಪೂ... ಪುನೀತ್...’ ಅನ್ನುವ ಕೂಗು.

ಅದನ್ನು ಕೇಳಿಸಿಕೊಂಡ ಅಪ್ಪು, ಶೂಟ್ ನಿಲ್ಲಿಸಿ, ಸೀದಾ ಹೋಗಿ ಬಸ್ ನಿಲ್ಲಿಸಿದರು. ಎಲ್ಲರಿಗೂ ಮಾತಾಡಿಸಿಯೇ ಮುಂದಿನ ಕೆಲಸ ಮಾಡಿದ್ದು.

ಇನ್ನೊಮ್ಮೆ ನಂದಿನಿ ಹಾಲಿನ ಜಾಹೀರಾತಿನ ಚಿತ್ರೀಕರಣ. ಮಧುಗಿರಿ ಬೆಟ್ಟದ ಮೇಲೆ ಶೂಟಿಂಗ್. ಹೇಗೋ ವಿಷಯ ತಿಳಿದ ಜನ ಬೆಟ್ಟದ ಕೆಳಗೆ ಮುತ್ತಿಕೊಂಡಿದ್ದರು. ನಮಗೆ ಹೆಚ್ಚು ಸಮಯವಿರಲಿಲ್ಲ. ಜನರನ್ನು ಮೇಲೆ ಬಿಟ್ಟಿರಲಿಲ್ಲ. ಅವರ ಕೂಗಾಟ ಕೇಳಿಸ್ಕೊಂಡ ಅಪ್ಪು ಮತ್ತೆ ಶೂಟ್ ನಿಲ್ಲಿಸಿ, ಅವರ ಬಳಿಗೇ ಹೋಗಿ ಮಾತಾಡಿದರು. ‘ಏನ್ ಸರ್ ಇದು? ಇಷ್ಟು ಬೇಗ ಇಷ್ಟು ಜನ’ ಎಂದೆ. ಅದಕ್ಕೆ ಅವರು ‘ಇರಲಿ ಬಿಡಿ. ಅವರಿದ್ದರೆ ನಾವು’ ಅಂದು ಕೈ ಮುಗಿದಿದ್ದರು.

ಯಾವುದೇ ಹೊಸ ನಟನಿರಲಿ, ಅವರ ಪ್ರೋತ್ಸಾಹ ನಿರಂತರ. ನಮ್ಮ ಧನಂಜಯ ಆಗಿನ್ನೂ ‘ಡೈರೆಕ್ಟರ್ ಸ್ಪೆಷಲ್’ನಲ್ಲಿ ನಟಿಸುತ್ತಿದ್ದ ಸಮಯ. ಆ ಸಮಯದಲ್ಲಿ ಅಪ್ಪು ಜೊತೆ ಜಾಹೀರಾತು ಶೂಟ್ ಒಂದು ಬಂತು. ಧನಂಜಯ ‘ನಾನೂ ಬರ್ತೀನಿ...’ ಎಂದು ನನ್ನೊಟ್ಟಿಗೆ ಬಂದಿದ್ದರು. ಶೂಟ್ ಮುಗಿದ ಮೇಲೆ ಪರಿಚಯಿಸಿದೆ. ‘ಓಹ್ ಗುರು ಸಿನಿಮಾ ಹೀರೊ ಇವರೇನಾ? ನಿಮ್ಮ ಕಣ್ಣಲ್ಲಿ ಏನೋ ಇದೆ. ಆಲ್ ದಿ ಬೆಸ್ಟ್. ಹೀಗೇ ಬೆಳೀರಿ’ ಅಂದಿದ್ದರು. ಮುಂದೆ ಅವರಿಬ್ಬರೂ ‘ಯುವರತ್ನ’ದಲ್ಲಿ ಕೆಲಸ ಕೂಡ ಮಾಡಿದರು.

## ಅಕ್ಕರೆಗೆ ಎಲ್ಲೆ ಎಲ್ಲಿ?

ಎಲ್ಲೇ ಇರಲಿ, ಅದೆಷ್ಟೇ ಜಂಗುಳಿ ಇರಲಿ. ಪರಿಚಯದವರು, ಸಿನಿಮಾ ರಂಗದ ಹಿರಿಯರು ಕಣ್ಣಿಗೆ ಕಂಡರೆ ತಾನೇ ಬಂದು ಮಾತಾಡಿಸುವುದು ಅವರ ಅಭ್ಯಾಸ. ಎಷ್ಟೋ ಸಲ ನನ್ನ ಸೋಜಿಗಕ್ಕೆ ಕಾರಣರಾಗಿದ್ದಾರೆ ಅವರು.

ನಟಿ ಭಾವನಾ ಅವರ ಮದುವೆ ಸಂದರ್ಭ. ಯಾವುದೋ ಹೋಟೆಲಿನಲ್ಲಿ ನಾನೂ ಕುಟುಂಬ ಸಮೇತ ಹೋಗಿ, ಊಟ ಮುಗಿಸಿ ಹೊರಟಿದ್ದೆ. ಇನ್ನೇನು ಬಾಗಿಲಿನ ಬಳಿ ಹೋಗಬೇಕು, ಸಾಲು ಸಾಲು ಕಾರು ಬಂತು. ಅಪ್ಪು ಬಂದರು ಅಂತ ತಿಳೀತು. ಅಲ್ಲಿದ್ದ ಜನ ಕಾರಿನ ಬಳಿ ಮುಗಿಬಿದ್ದರು. ಇನ್ನು ಹೋಗೋದು ಕಷ್ಟ ಅಂತ ನಾವು ಅಲ್ಲೇ ಬದಿಗೆ ನಿಂತೆವು. ಕಾರಿನಿಂದಿಳಿದು ಅಷ್ಟು ದೂರ ಹೋದ ಅವರು ಎಲ್ಲೋ ಆ ಜಂಗುಳಿಯಲ್ಲಿ ನನ್ನ ಕಂಡುಬಿಟ್ಟರು! ಮತ್ತೆ ತಿರುಗಿ ಬಂದು ‘ಹೇಗಿದ್ದೀರಾ?



ರಾಜ್‌ಕುಮಾರ್ ಮತ್ತು ರಜನೀಕಾಂತ್ ನಡುವೆ ಬೆಚ್ಚಗೆ ಕೂತಿರುವ ಪುನೀತ್
ಚಿತ್ರ: ಕೆ.ಎನ್. ನಾಗೇಶ್‌ಕುಮಾರ್